ವಿದೇಶಿ ಸಹಾಯದಿಂದ ವಿದ್ಯುಚ್ಛಕ್ತಿ ಉತ್ಪಾದನೆ

537 - ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿದೇಶಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಮಾಡಿಕೊಂಡಿರುವ ಕರಾರುಗಳ ವಿವರಗಳೇನು?*

ಆ) *ಉತ್ಪಾದನೆಗೆ ಸಂಬಂಧಿಸಿದ ಷರತ್ತುಗಳು, ವಿತರಣೆಗೆ ಸಂಬಂಧಿಸಿದ ಷರತ್ತುಗಳು ಹಾಗೂ ವಿದೇಶಿ ಸಂಸ್ಥೆಗಳಿಗೆ ಪಾವತಿಸುವ ಸಂಬಂಧ ಷರತ್ತುಗಳ ವಿವರಗಳೇನು?*

ಇ) *ವಿವಿಧ ಸಂಸ್ಥೆಗಳ ಜೊತೆಗೆ ಮಾಡಿಕೊಂಡಿರುವ ಒಪ್ಪಂದಗಳ ವಿವರಗಳೇನು?*

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಈವರೆಗೆ ಯಾವ ವಿದೇಶಿ ಸಂಸ್ಥೆಯೊಂದಿಗೂ ಸಹ ಭಾಗಿತ್ವದಲ್ಲಿ ಕರಾರು (ಅಗ್ರಿಮೆಂಟ್) ಮಾಡಿಕೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆಯ ಕಂಗ್ರಾಳಿ (ಕೆ.ಹೆಚ್) ಹತ್ತಿರವಿರುವ ಸೇತುವೆ ಬಗ್ಗೆ

464 - ಶ್ರೀ ಬಿ.ಐ. ಪಾಟೀಲ (ಉಚ್ಚಾಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗಾಂವ ಜಿಲ್ಲೆಯ ಬೆಳಗಾಂವ ತಾಲ್ಲೂಕಿನ ಕಂಗ್ರಾಳಿ(ಕೆ.ಹೆಚ್) ಹತ್ತಿರವಿರುವ ಸೇತುವೆಯ ಮೇಲೆ (ಮಳೆಗಾಲದಲ್ಲಿ) ನೀರು ಹರಿಯುವುದು ಸರಕಾರದ ಗಮನಕ್ಕೆ ಬಂದಿರುವುದೆಯೇ?*

ಆ) *ಈ ಸೇತುವೆ ಕಾಮಗಾರಿಗಾಗಿ ಅಂದಾಜು ನಕ್ಷೆ ಹಾಗೂ ಪತ್ರಿಕೆಯನ್ನು ತಯಾರಿಸಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಇ) *ಸದರಿ ಸೇತುವೆಯ ಕಾಮಗಾರಿಗೆ ಆದ ವಿಳಂಬಕ್ಕೆ ಕಾರಣವೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸದರಿ ಕಾಮಗಾರಿಯು 1993-94 ಹಾಗೂ 1994-95ನೇ ಸಾಲಿನಲ್ಲಿ ಸೇರ್ಪಡೆಯಾಗಿಲ್ಲ.

ಖಾಸಗಿ ವಿದ್ಯುತ್ ಉತ್ಪಾದನೆ ಕುರಿತು

534 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಖಾಸಗಿಯವರು ವಿದ್ಯುತ್ ಉತ್ಪತ್ತಿ ಮಾಡಲು ಉದ್ದೇಶಿಸಿದ್ದರೆ ಆ ವಿದ್ಯುತ್ತಿನ ವಿತರಣೆ ಮಾಡುವ ಸಂಸ್ಥೆಯೊಡನೆ ಯಾವುದಾದರೂ ಒಪ್ಪಂದ ಆಗಿದೆಯೇ? ಅಥವಾ ಚರ್ಚೆ ನಡೆಯುತ್ತಾ ಇದೆಯೇ? ಅವರು ಅಪೇಕ್ಷಿಸಿರುವ ಯೂನಿಟ್‌ದ ದರವೇನು?*

ಆ) *ಅಸಾಂಪ್ರದಾಯಕ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳೇನಾದರೂ ಪರಿಶೀಲನೆಯಲ್ಲಿವೆಯೇ? ಇದ್ದರೆ ಹೆಸರು ಅಗತ್ಯವಾದ ಬಂಡವಾಳ ಮತ್ತು ಬಂಡವಾಳದ ಮೂಲ ಇವುಗಳನ್ನು ಒದಗಿಸುವುದು.*

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :